.R.P.67

Form No.4 (Civil)
Deposition Sheets
(R.P.No.57)

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಮಂಡ್ಯ

ಎಸ್.ಸಿ. ನಂ.39/2021

ದಿನಾಂಕಃ 06.09.2022 ರಂದು ಪ್ರಮಾಣ ವಚನ ಬೋಧಿಸಲಾಗಿದೆ

ಸಿ. ಡಬ್ಲ್ಯೂ:6 ಪಿ. ಡಬ್ಲ್ಯೂ:6

| | |
|---|---|
| ಸಾಕ್ಷಿದಾರರ ಹೆಸರು | ಪರಿಮಳ |
| ಗಂಡನ ಹೆಸರು | ಸ್ವಾಮಿ |
| ವಯಸ್ಸು | 40 ವರ್ಷ |
| ಉದ್ಯೋಗ | ಗೃಹಿಣಿ |
| ವಾಸ | ಮರಿಗೌಡ ಬಡಾವಣೆ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ

ಚಾಸಾ.1 ತಿರುಮಲ ನನ್ನ ಮಗ. ಚಾಸಾ.2 ಸ್ವಾಮಿ ನನ್ನ ಗಂಡ. ನ್ಯಾಯಾಲಯದ ಮುಂದೆ ಇರುವ ಆರೋಪಿತರು ನನ್ನ ಸಂಬಂಧಿಕರು. 1 ನೇ ಆರೋಪಿ ಶಂಕರ್ ನನ್ನ ಸ್ವಂತ ಅಣ್ಣ. 2 ನೇ ಆರೋಪಿ ಶ್ರೀನಿಧಿ ನನ್ನ ನಾದಿನಿಯ ಗಂಡ. ಸಿದ್ದಪ್ಪ ನಮ್ಮ ಯಜಮಾನರ ಅಣ್ಣ. ಈ ದಿವಸ ಅವರು ನ್ಯಾಯಾಲಯದ ಮುಂದೆ ಹಾಜರಿರುವುದಿಲ್ಲ(A3 split up). 4 ನೇ ಆರೋಪಿ ಭಾಗ್ಯ ನನ್ನ ಗಂಡನ ತಂಗಿ. 5 ನೇ ಆರೋಪಿ ಲಕ್ಷ್ಮಿ ನನ್ನ ಗಂಡನ ಅಕ್ಕ. 6 ನೇ ಆರೋಪಿ ಪುಟ್ಟೀರಮ್ಮ ನನ್ನ ಅತ್ತೆ (ಗಂಡನ ತಾಯಿ). 7 ನೇ ಆರೋಪಿ ನನ್ನ ಗಂಡನ ತಂಗಿ. ಚಿಕ್ಕವೀರಭದ್ರ ನಮ್ಮ ತವರು ಮನೆಕಡೆಯಿಂದ ಸಂಬಂದಿ ಆಗಬೇಕು. ಚಿಕ್ಕವೀರಭದ್ರ ರವರೇ ಈ ಗಲಾಟೆಗೆಲ್ಲಾ ಕಾರಣರಾಗಿರುತ್ತಾರೆ. ಈ ದಿವಸ ಅವರು ನ್ಯಾಯಾಲಯದ ಮುಂದೆ ಹಾಜರಿರುವುದಿಲ್ಲ (A8 split up). ಈಗ ನನಗೆ ತೋರಿಸಿದ 10 ಫೋಟೋಗಳಲ್ಲಿ ನನ್ನ ಯಜಮಾನರು ಇದ್ದಾರೆ. ಸದರಿ ಫೋಟೋಗಳಿಗೆ ಸಂಬಂಧಪಟ್ಟಿರುವ ಸಾಕ್ಷ್ಯ ಅಧಿನಿಯಮ ಕಲಂ 65(ಬಿ) ದೃಢೀಕರಣ ಪತ್ರ ಕಡತದಲ್ಲಿ ಲಭ್ಯ ಇರುವುದಿಲ್ಲ, ಆದ್ದರಿಂದ ಆರೋಪಿತರ ವಕೀಲರು , ಫೋಟೋಗಳನ್ನು ನಿಶಾನೆಯಾಗಿ ಗುರುಪಡಿಸಲು ಆಕ್ಷೇಪಣೆ ಮಾಡಿರುತ್ತಾರೆ. ಆದ್ದರಿಂದ ಫೋಟೋಗಳನ್ನು ನಿಶಾನೆಗೆ

ಗುರಿಪಡಿಸಿರುವುದಿಲ್ಲ. ನನಗೆ ಮೇಲೆ ತೋರಿಸಿದ ಫೋಟೋದಲ್ಲಿ, ನನ್ನ ಗಂಡನಿಗೆ ರಕ್ತ ಗಾಯಗಳು ಕಾಣಿಸುತ್ತಿವೆ. ಈ ವರ್ಷ ಸೆಪ್ಟೆಂಬರ್ 30 ಕ್ಕೆ ಘಟನೆ ನಡೆದು 2 ವರ್ಷಗಳು ಆಗುತ್ತವೆ. ನಾನು ಮತ್ತು ನನ್ನ ಮಗಳು ದೊಡ್ಡಪ್ಪನ ನೋಡಲು ಮಂಡ್ಯದ ಹೊಸಹಳ್ಳಿಗೆ ಹೋಗಿದ್ದೆವು. ಮನೆಯಲ್ಲಿ ನನ್ನ ಗಂಡ ಚಾಸಾ.2 ಮತ್ತು ನನ್ನ ಮಗ ಚಾಸಾ.1 ಇದ್ದರು. ನಾವು ಮರಿಗೌಡ ಬಡಾವಣೆಯಲ್ಲಿ 2 ನೇ ಕ್ರಾಸ್ ನಲ್ಲಿ ವಾಸ ಇದ್ದೇವೆ. ಆರೋಪಿತರು ಸಹಾ ಮರಿಗೌಡ ಬಡಾವಣೆಯ 2 ನೇ ಕ್ರಾಸ್ ನ ನಮ್ಮ ಮನೆಯ ಪಕ್ಕದಲ್ಲಿ ಇದ್ದರು. ನಮ್ಮ ಮತ್ತು ಆರೋಪಿತರ ಮನೆಯ ಒಂದೇ ಗೋಡೆ ಇದೆ.

ಆ ದಿವಸ ನಾನು ಬೆಳಗ್ಗೆ ನಾನು 8.30 ಗೆ ನನ್ನ ಗಂಡ (ಚಾಸಾ.2 ) ರವರಿಗೆ ಫೋನ್ ಮಾಡಿ ಬಂದು ನನ್ನನ್ನು ಕರೆದುಕೊಂಡು ಹೋಗಿ ಅಂತ ಹೇಳಿದ್ದೆನು. ಬೆಳಗ್ಗೆ 9.30 ಸಮಯದಲ್ಲಿ ಶರತ್ ಎಂಬುವರು ಫೋನ್ ಮಾಡಿ, ಶಂಕರ, ಶ್ರೀನಿಧಿ , ಲಕ್ಷ್ಮಿ, ಗೀತ, ಬಾಗ್ಯ, ಸಿದ್ದಪ್ಪ ಇವರೆಲ್ಲರೂ, ನಿಮ್ಮ ಗಂಡನಿಗೆ ಹೊಡೆದಿದ್ದಾರೆ ಎಂದು ತಿಳಿಸಿದರು. ನಾನು ಕೂಡಲೇ ಆಟೋ ಮಾಡಿಕೊಂಡು ಮರಿಗೌಡ ಬಡಾವಣೆಗೆ ಬಂದೆನು. ಮನೆ ಮುಂದೆ ತುಂಬಾ ರಕ್ತ ಚೆಲ್ಲಿತ್ತು ಹಾಗೂ ಕಲ್ಲುಗಳು ಬಿದ್ದಿತ್ತು. ನಾನು ಮಂಡ್ಯ ಜಿಲ್ಲಾ ಆಸ್ಪತ್ರೆಗೆ ಹೋದೆನು. ನಾನು ನನ್ನ ಮಗ ತಿರುಮಲ ಗೆ ಏನು ಗಲಾಟೆ ಆಯಿತು ಅಂತ ಕೇಳಿದೆನು. ಆಗ ಚಾಸಾ.1 , ಆರೋಪಿತರು ಎಲ್ಲಾ ಸೇರಿ ಹಲ್ಲೆ ಮಾಡಿದರು ಅಂತ ಹೇಳಿದನು. ಚಾಸಾ.1 ತಿರುಮಲ ನಿಗೆ ಕೈ ಬೆರಳುಗಳು ಊತಗೊಂಡಿತ್ತು, ಮಡಿಸಲು ಆಗುತ್ತಿರಲಿಲ್ಲ, ಕಿವಿಯಲ್ಲಿ ರಕ್ತ ಬರುತ್ತಿತ್ತು. ನನ್ನ ಗಂಡ ಚಾಸಾ.2 ರವರಿಗೆ ಹಣೆಗೆ, ಗಲ್ಲಕ್ಕೆ, ಕತ್ತಿಗೆ, ಕೆನ್ನೆಗೆ ಏಟಾಗಿತ್ತು. ವೈದ್ಯರು ಚಿಕಿತ್ಸೆ ನೀಡಿ ಹೆಚ್ಚಿನ ಚಿಕಿತ್ಸೆಗೆ ಬೆಂಗಳೂರಿಗೆ ಕರೆದುಕೊಂಡು ಹೋಗಿ ಅಂತ ತಿಳಿಸಿದರು. ಚಾಸಾ.1 ಮತ್ತು 2 ರವರನ್ನು super specialty Asthra ಆಸ್ಪತ್ರೆಗೆ ಕರೆದುಕೊಂಡು ಹೋದೆವು. ನಿಮಾನ್ಸ್ ಗೆ ಕರೆದುಕೊಂಡು ಹೊಗಿದ್ದೆವು, ನಿಮಾನ್ಸ್ ನಲ್ಲಿ ಕೋವಿಡ್ ಇದ್ದುದರಿಂದ ಆಗುವುದಿಲ್ಲ ಎಂದು ಹೇಳಿದರು. ಆಸ್ಪತ್ರೆಯಲ್ಲಿ 25 ದಿವಸ ಇದ್ದೆವು. ಚಾಸಾ.1 , 1 ನೇ ಆರೋಪಿ ಶಂಕರ ದಿಂಡುಗಲ್ಲನ್ನು ಚಾಸಾ.2 ರವರ ತಲೆಯ ಮೇಲೆ ಎತ್ತಿ ಹಾಕಿದನು ಅಂತ ಹೇಳಿದನು. ಆರೋಪಿತರು ದೊಣ್ಣೆಯಿಂದ ಚಾಸಾ.1 ರವರ ಕೈಗೆ ಹೊಡೆದರು ಹಾಗೂ ಕುಡುಗೋಲಿನಿಂದ ಕಿವಿಗೆ ಹೊಡೆದರು ಅಂತ ಚಾಸಾ.1 ನನಗೆ ಹೇಳಿದರು.

ಸಿವಿಲ್ ಕೋರ್ಟಿನಲ್ಲಿ ಆಸ್ತಿ ಭಾಗಾಂಶಕ್ಕೆ ನನ್ನ ಗಂಡ ಮತ್ತು ಆರೋಪಿತರ ನಡುವೆ ಕೇಸು ನಡೆಯುತ್ತಿದ್ದ ವಿಚಾರಕ್ಕೆ ಗಲಾಟೆ ಆಯಿತು. ಘಟನೆ ನಡೆದ ಸದರಿ ದಿವಸ, ನನ್ನ ಗಂಡ(ಚಾಸಾ.2) ಮನೆ ರಿಪೇರಿ ಮಾಡಿಸುತ್ತಿದ್ದಾಗ , ಆರೋಪಿತರು, ಸಿವಿಲ್ ಕೋರ್ಟ್ ನಲ್ಲಿ ಕೇಸು ನಡೆಯುತ್ತಿದೆಯಲಾ ಯಾಕೆ ರಿಪೇರಿ ಮಾಡಿಸುತ್ತಿದ್ದೀಯಾ ಅಂತ ಕೇಳಿದರು ಹಾಗೂ ಕೇಸನ್ನು

ವಾಪಾಸ್ಸು ತೆಗೆದುಕೋ ಹಾಗೂ ನಾವು ಹೇಳಿದಂತೆ ನೀನು ಹೇಳು ಅಂತ ಕೇಳಿದರು. ಚಿಕ್ಕವೀರಭದ್ರ (A 8) ಹೇಳಿದಂತೆ ನಾವೆಲ್ಲರೂ ಆ ಕಡೆ ಈ ಕಡೆ ಓಡಿ ಹೋಗೋಣ ಅಂತ 1 ನೇ ಆರೋಪಿ ಶಂಕರ ಎಲ್ಲಾ ಆರೋಪಿತರನ್ನು ಕರೆದುಕೂಂಡು ಹೊರಟು ಹೋದನು ಅಂತ ಚಾಸಾ.1 ನನಗ ಹೇಳಿದನು. ನನ್ನ ಗಂಡ ಚಾಸಾ.2 ಪೂರ್ತಿ ಗುಣಮುಖ ಆಗಿರುವುದಿಲ್ಲ , ಅವರಿಗೆ ಮತ್ತೊಂದು ಶಸ್ತ್ರ ಚಿಕಿತ್ಸೆಯನ್ನು ಮಾಡಿಸಬೇಕಿದೆ . ಅವರಿಗೆ ಮುಖದಲ್ಲಿ ಚೈನುಗಳನ್ನು ಹಾಕಿದ್ದಾರೆ, ಅವುಗಳನ್ನು ತೆಗೆಸಬೇಕಿದೆ. ಸದರಿ ಘಟನೆಯಿಂದ ಚಿಕಿತ್ಸೆಗಾಗಿ ಒಟ್ಟು ನಮಗೆ 15 ಲಕ್ಷ ಹಣ ಖರ್ಚು ಆಗಿದೆ.

<u>ಪಾಟೀ ಸವಾಲುಃ</u> ಆರೋಪಿಗಳ ಪರ ಶ್ರೀ ಬಿ.ಆರ್.ವಿ.ವಕೀಲರು, ಪಾಟೀ ಸವಾಲನ್ನು ಮದ್ಯಾಹ್ನ 2.45 ಗಂಟೆಗೆ ಮಾಡುವುದಾಗಿ ಸೂಚಿಸಿದ್ದರ ಮೇರೆಗೆ, ಮದ್ಯಾಹ್ನದ ಅವಧಿಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ. ಹೇ. ಕೇ. ಸ. ಒ

(ಶೀಲ .ಎನ್)
1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ಮಂಡ್ಯ.